(ದಿನಾಂಕಃ 06-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು)

ಮುಂದುವರೆದ ಪಾಟೀ ಸವಾಲು ಃ ಶ್ರೀ. ಕೆ ಬಿ ಕೆ ವಾದಿ ಪರ ವಕೀಲರಿಂದ -

ದಿನಾಂಕ 13-03-1992 ರಲ್ಲಿ ಮೊಹಮ್ಮದ ಶಫಿ ಇವರು ಸರ್ವೆ ನಂ. 118 ರಲ್ಲಿ 2 ಎಕರೆ ಜಮೀನಿಗೆ ಬಿನ್ ಶೇತಗಿ ಮಾಡಿಸಿರುತ್ತಾರೆ ಎಂದರೆ ಸರಿ . ಅದರಲ್ಲಿ ಸಿ ಟಿ ಎಸ್ ನಂ. 4335 ಕೊಟ್ಟಿರುತ್ತಾರೆ ಎಂದರೆ ಸರಿ . ಆ 2 ಎಕರೆ ಜಮೀನಿಗೆ 1 ರಿಂದ 46 ಪ್ಲಾಟಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿ . ಇದೇ ಸರ್ವೆ ನಂ. 118 ರಲ್ಲಿ 2 ಎಕರೆ 10 ಗುಂಟೆ ಪುನಃ ಬಿನ್ ಶೇತಗಿ ಮಾಡಿಸಿರುತ್ತಾರೆ ಎಂದರೆ ಸರಿ . 2 ನೇ ಬಾರಿ ಬಾನ್ ಶೇತಗಿ ಮಾಡಿಸಿದ 2 ಎಕರೆ 10 ಗುಂಟೆ ಜಮೀನಿಗೆ ಸಿ ಟಿ ಎಸ್ ನಂ. 4335/ಎ ಎಂದು ಕೊಟ್ಟಿರುತ್ತಾರೆ ಎಂದರೆ ಸರಿ. ಆ 2 ಎಕರೆ 10 ಗುಂಟೆ ಜಮೀನಿಗೆ 1 ರಿಂದ 47 ಪ್ಲಾಟಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಅದು ದಿನಾಂಕ 25-10-2002 ರಂದು 2 ಎಕರೆ 10 ಗುಂಟೆ ಬಿನ್ ಶೇತಗಿ ಆಗಿರುತ್ತದೆ ಎಂದರೆ ಸರಿ. 2 ಎಕರೆ ಮತ್ತು 2 ಎಕರೆ 10 ಗುಂಟೆ ಜಮೀನುಗಳ ಮಧ್ಯ ಭಾಗದಲ್ಲಿ 30 ಗುಂಟೆ ಶೇತಗಿ ಜಮೀನು ಇದೆ ಎಂದರೆ ಸರಿಯಲ್ಲ.

ವಾದಿಯು ನ್ಯಾಯಾಲಯದಲ್ಲಿ ಹಾಜರ ಪಡಿಸಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಸದ್ರಿ ಕಾಗದ ಪತ್ರಗಳನ್ನು ನಮ್ಮ ವಕೀಲರ ಮೂಲಕ ನೋಡಿ ತಿಳಿದುಕೊಳ್ಳಲು ಯಾವುದೇ ಅಡಚಣೆ ಇರಲಿಲ್ಲ. ನಿ.ಪಿ.1 ರ ಪಹಣಿ ಪತ್ರಿಕೆ ಸರ್ವೆ ನಂ. 118/ ಅ ಇದು ವಾದಿ ಹೆಸರಿನಲ್ಲಿದೆ ಎಂದರೆ ಸರಿ. ಸದ್ರಿ ಜಮೀನಿನ ಮೇಲೆ ವಾದಿಯು ಬ್ಯಾಂಕಿನಲ್ಲಿ ಸಾಲ ಪಡೆದಿರುತ್ತಾನೆ ಎಂದರೆ ನನಗೆ ಮಾಹಿತಿ ಇಲ್ಲ. ಪಿ ಕೆ ಪಿ ಎಸ್ ಸೊಸೈಟಿಯಲ್ಲಿ ರೂ. 45,000-00 ದಾವಾಸ್ತಿ ಮೇಲೆ ಸಾಲ ಪಡೆದಿರುತ್ತಾರೆ ಎಂದರೆ ಸರಿ. ಅದೇ ರೀತಿ ಬಸವೇಶ್ವರ ಅರ್ಬನ ಕೊ-ಆಪ್ ಕ್ರೆ.'ಸೌಹಾರ್ದ ಬ್ಯಾಂಕ , ಸಂಕೇಶ್ವರದಲ್ಲಿ ವಾದಿ ರೂ. 99,000-00 ವಾದಿ ಸಾಲ ಪಡೆದಿರುತ್ತಾಳೆ ಎಂದರೆ ಸರಿ . ಸಾಕ್ಷಿಯು ದಾಖಲೆಗಳನ್ನು ನೋಡಿ ಒಪ್ಪಿದ್ದರಿಂದ ಅವುಗಳನ್ನು ನಿ.ಪಿ.21 ಮತ್ತು 22 ಎಂದು ಗುರುತಿಸಲಾಯಿತು.

ನಾವು ಸಲ್ಲಿಸಿದ ಪ್ರತಿವಾದ ಪತ್ರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಅದರಲ್ಲಿ ಸಿಟಿಎಸ್ ನಂ. 4335 ರಲ್ಲಿ 1 ರಿಂದ 46 ಪ್ಲಾಟಗಳು ಇವೆ ಎಂದು ಹೇಳಿ ಬರೆಸಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ಸಿಟಿಎಸ್ ನಂ. 4335/ಎ ರಲ್ಲಿ 1 ರಿಂದ 61 ಪ್ಲಾಟಗಳು ಇವೆ ಎಂದು ಹೇಳಿ ಬರೆಸಿರುತ್ತೇವೆ. ಸಿಟಿಎಸ್ ನಂ. 4335 ರಲ್ಲಿ 1 ರಿಂದ 46 ಪ್ಲಾಟಗಳು ಇವೆ ಎಂದು ಮಾಹಿತಿ ನಮಗೆ ಹೇಗೆ ಗೊತ್ತಾಯಿತು ಎಂದು ನನಗೆ ಗೊತ್ತಿಲ್ಲ. ಯಾವ ಆಧಾರದ ಮೇಲೆ ನಾನು ಲಿಖಿತ ಹೇಳಿಕೆ ಬರೆಸಿರುತ್ತೇನೆ ಎಂದು ಹೇಳಲು ಆಗುವುದಿಲ್ಲ. ಅದೇ ರೀತಿ ಸಿಟಿಎಸ್

ನಂ. 4335/ಎ ರಲ್ಲಿ 1 ರಿಂದ 61 ಪ್ಲಾಟಗಳು ಇವೆ ಎಂದು ಮಾಹಿತಿ ನಮಗೆ ಹೇಗೆ ಗೊತ್ತಾಯಿತು ಎಂದು ನನಗೆ ಗೊತ್ತಿಲ್ಲ. ಯಾವ ಆಧಾರದ ಮೇಲೆ ನಾನು ಲಿಖಿತ ಹೇಳಿಕೆ ಬರೆಸಿರುತ್ತೇನೆ ಎಂದು ಹೇಳಲು ಆಗುವುದಿಲ್ಲ. ಈ ಎರಡೂ ಸಿ ಟಿ ಎಸ್ ನಂಬರಗಳ ಪ್ಲಾಟ ನಂಬರ 1 ರಿಂದ 46 ಮತ್ತು 1 ರಿಂದ 61 ಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಹಾಜರ ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

ವಾದಿ ನಾವು ಮನೆ ಕಟ್ಟುವ ವೇಳೆ ಯಾವ ದಿನಾಂಕದಂದು ಬಂದು ಮನೆ ಕಟ್ಟುವುದನ್ನು ನೋಡಿಕೊಂಡು ಹೋಗಿರುತ್ತಾರೆ ಎಂದು ದಿನಾಂಕ ಗೊತಿತಲ್ಲ ಆದರೆ 2003-04 ರಲ್ಲಿ ಅವರು ಬಂದು ಹೋಗಿರುತ್ತಾರೆ. ದಾವಾಸ್ತಿಯನ್ನು ಸರ್ವೆ ಮಾಡಲು ಮೋಜಣಿ ಅಧಿಕಾರಿಗಳು ಬಂದಿದ್ದರು. ಮೋಜಣಿ ಮಾಡಿದ್ದು ಬೋಗಸ ಇರುತ್ತದೆ. ಮೋಜಣಿ ಮಾಡಲು ಬಂದಿದ್ದು ನನಗೆ 2015 ರಲ್ಲಿ ಗೊತ್ತಾಗಿರುತ್ತದೆ. ಮೋಜಣಿ ಅಧಿಕಾರಿಗಳು ಸರ್ವೆ ಮಾಡಿದ ನಂತರ ಪಿಟಿ ಶೀಟ ತಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪಿಟಿ ಶೀಟ ಪ್ರಕಾರ 30 ಗುಂಟೆ ಜಮೀನನ್ನು ವಾದಿಯೇ ಕಬ್ಜಾ ವೈವಾಟು ಮಾಡುತ್ತಿದ್ದಾಳೆ ಎಂದರೆ ಸರಿಯಲ್ಲ. ಪಿಟಿ ಶೀಟ ತಪ್ಪು ಇದೆ ಎಂದು ಡಿ.ಡಿ.ಎಲ್.ಆರ್ ಮುಂದೆ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಆ ಪ್ರಕಾರ ಡಿಡಿಎಲ್ ಆರ್ ಮುಂದೆ ಅಪೀಲು ಸಲ್ಲಿಸಲು ಯಾವುದೇ ಅಡಚಣೆ ಇರಲಿಲ್ಲ. ಇವತ್ತಿನವರೆಗೂ 30 ಗುಂಟೆ ಜಮೀನನ್ನು ವಾದಿಯು ಕಬ್ಜಾ ವೈವಾಟು ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ಈ ಎಲ್ಲ ವಿಷಯಗಳು ಗೊತ್ತಿದ್ದರೂ ಸಹ ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಕೈಫಿಯತ್ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮೊದಲನೆ 2 ಎಕರೆ ಬಿನ್ ಶೇತಗಿ ಜಮೀನಿನ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ಅದೇ ರೀತಿ 2 ಎಕರೆ 10 ಗುಂಟೆ ಬಿನ್ ಶೇತಗಿ ಜಮೀನಿನ ಚೆಕ್ಕುಬಂದಿ ನನಗೆ ಹೇಳಲು ಬರುವುದಿಲ್ಲ. ವಾದಿ ಬೆಳೆ ಬೆಳೆಯುತ್ತ ಕಬ್ಜಾ ವೈವಾಟು ಮಾಡುತ್ತಿದ್ದರೂ ಸಹ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ದಂಡಾಗಾಯತನದಿಂದ ದಾಸ್ತಿಯಲ್ಲಿ ಅಡ್ಡಾದಿಡ್ಡಿಯಾಗಿ ಮನೆ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಾವು ಕಾಯ್ದೆ ಶೀರ ಮನೆಗಳನ್ನು ಕಟ್ಟಿಸಿರುತ್ತೇವೆ. ಕಟ್ಟಿದ ಮನೆಗಳನ್ನು ನಿಮ್ಮ ಖರ್ಚಿನಲ್ಲಿ ತೆಗೆದುಕೊಳ್ಳಬೇಕೆಂದು ತಿಳಿಸಿದರೂ ಸಹ ನಾವು ಮನೆಗಳನ್ನು ತೆರವುಗೊಳಿಸದೇ ಇರುವುದರಿಂದ ವಾದಿ ಈ ದಾವೆ ಸಲ್ಲಿಸಿರುತ್ತಾಳೆ ಎಂದರೆ ಸರಿಯಲ್ಲ.

ವಾದಿ ಕೆಲವೊಂದು ಮನೆಗಳನ್ನು ಕಟ್ಟುವದನ್ನು ತಕರಾರು ಮಾಡಿದ್ದರೂ ಸಹ ವಾದಿ ಹೆಣ್ಣು ಮಗಳು ಇರುವುದರಿಂದ ದಂಡಗಾಯತನದಿಂದ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೆ ಕೇ ಸರಿ ಅದೇ**

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**